ದಿನಾಂಕಃ 21-07-2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಪಾಟಿ ಸವಾಲುಃ–** ವಾದಿ ಪರ ಶ್ರೀ ಎನ ಆರ ಬಿ ವಕೀಲರಿಂದ

ಖರೀದಿ ಮಾಡಿದ ಜಾಗೆ ಗಾಂವಠಾಣಾ ಜಾಗೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಅದು ಗಾಂವಠಾಣಾ ಜಾಗೆ ಅಲ್ಲ ಆದರೆ ಮೂರು ಜನರ ಹೆಸರಿನಲ್ಲಿ ಇದ್ದ ಜಾಗೆಯನ್ನು ಖರೀದಿಸಿದ್ದೆನೆ ಎಂದು ನುಡಿದಿದ್ದಾರೆ. ಖರೀದಿ ಪತ್ರದ 3 ನೇ ಪುಟದಲ್ಲಿ ಗಾಂವಠಾಣಾ ಹದ್ದಿಯಲ್ಲಿ ಇರುವ ಜಾಗೆ ಎಂದು ಬರೆಯಲಾಗಿದೆ ಎಂದರೆ ಸಾಕ್ಷಿಯು ಯಾವುದೇ ಉತ್ತರ ನೀಡಿಲ್ಲ. ಗಾಂವಠಾಣಾ ಜಾಗೆಗೆ ಸಾಮಾನ್ಯವಾಗಿ ಅಳತೆ ಇರುವುದಿಲ್ಲ ಎಂದರೆ ಸಾಕ್ಷಿಯು ನಾನು ಖರೀದಿಸಿದ ಜಾಗೆ ಗಾಂವಠಾಣಾ ಜಾಗೆ ಅಲ್ಲ ಎಂದು ನುಡಿದಿದ್ದಾರೆ. ನಾನು ಭೂ–ಪರಿವರ್ತನೆ ಆದ ನಿವೇಶನ ಖರೀದಿಸಿದ್ದು ದಾಖಲೆಯಲ್ಲಿ ಇದ್ದಂತಹ ಅಳತೆಯನ್ನು ಖರೀದಿ ಪತ್ರದಲ್ಲಿ ತೋರಿಸಿದ್ದೆನೆ. ನಿಡಿ 1 ಖರೀದಿ ಪತ್ರದಲ್ಲಿ ಭೂ–ಪರಿವರ್ತನೆ ಆದ ನಿವೇಶನ ಎಂದು ಬರೆದಿಲ್ಲ ಎಂದರೆ ಸರಿ. ಭೂ–ಪರಿವರ್ತನೆ ಆದ ಜಮೀನಿನ ಸರ್ವೇ ಸಂಖ್ಯೆ ನಿಡಿ 1 ರಲ್ಲಿ ಬರೆಸಿಲ್ಲ. ಭೂ–ಪರಿವರ್ತನೆ ಆದ ಜಮೀನಿನ ಸರ್ವೇ ಸಂಖ್ಯೆ 164. ಸದರಿ ಜಮೀನು ಯಾವ ವರ್ಷದಲ್ಲಿ ಭೂ–ಪರಿವರ್ತನೆ ಮಾಡಲಾಗಿದೆ ಎಂದು ನನಗೆ ಗೊತ್ತಿಲ್ಲ.

ನಾನು ಖುಲ್ಲಾ ಜಾಗೆ ಖರೀದಿಸುವ ಮುಂಚೆ ಅದರ ದಾಖಲೆ ನೋಡಿದ್ದೆನು. ಸದರಿ ಜಾಗೆ ಮೂರು ಜನರ ಹೆಸರಿನಲ್ಲಿ ಇರುವುದನ್ನು ಕೂಲಂಕೂಷವಾಗಿ ನೋಡಿ

ಖರೀದಿಸಿರುತ್ತೇನೆ. ಯಾವ ವರ್ಷದಲ್ಲಿ ಮೂರು ಜನರ ಹೆಸರು ಆ ಜಾಗೆಗೆ ಪಂಚಾಯತಿ ದಾಖಲೆಯಲ್ಲಿ ದಾಖಲಾಗಿತ್ತು ಎಂಬ ಪ್ರಶ್ನೆಗೆ ಸಾಕ್ಷಿಯು ನಾನು ಆಸ್ತಿ ಖರೀದಿಸುವ ಸಮಯದಲ್ಲಿ ಅದು ಮೂರು ಜನರ ಹೆಸರಿನಲ್ಲಿ ಇತ್ತು ಎಂದು ನುಡಿದಿದ್ದಾರೆ.

ನಿಡಿ 22 ರಿಂದ 114 ದಾಖಲೆಗಳನ್ನು ಮೊದಲು ಹಾಜರುಪಡಿಸಲು ತೊಂದರೆ ಇರಲಿಲ್ಲ. ಪ್ರತಿವಾದಿ 4 ಬಿ ಈಗ ಹುರಳಿಕುಪ್ಪಿ ಗ್ರಾಮಪಂಚಾಯತಿಯ ಸದಸ್ಯರು ಎಂದರೆ ಸರಿ. ಪ್ರತಿವಾದಿ 4 ಬಿ ಹುರಳಿಕುಪ್ಪಿ ಗ್ರಾಮಪಂಚಾಯತಿಯ ಸದಸ್ಯರಾಗಿರುವುದರಿಂದ ನಾನು ಪಿಡಿಓ ರವರೊಂದಿಗೆ ಮೀಲಾಪಿಯಾಗಿ ದಾಖಲೆಗಳನ್ನು ಸೃಷ್ಟಿ ಮಾಡಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ಗುರುರಾಜ ಕುಲಕರ್ಣಿ, ದತ್ತಾತ್ರೇಯ ಕುಲಕರ್ಣಿ ಹಾಗೂ ವಿನಾಯಕ ಕುಲಕರ್ಣಿ ಇವರ ಹೆಸರು ದಾಖಲೆಗಳಿಂದ ತೆಗೆದು ನನ್ನ ಹೆಸರನ್ನು 2011 ರಲ್ಲಿ ದಾಖಲಿಸಲಾಗಿದೆ. ನಾನು ಭೂ-ಪರಿವರ್ತನೆ ಆದ ಸರ್ವೇ ಸಂಖ್ಯೆ 164 ನ್ನು ಖರೀದಿ ಮಾಡದಿದ್ದರೂ ಸಹ ದಾಖಲೆಗಳನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಇವತ್ತಿನವರೆಗೂ ಸರ್ವೇ ಸಂಖ್ಯೆ 164 ಕ್ಕೆ ವಾದಿಯರು ಮತ್ತು 1 ನೇ ಪ್ರತಿವಾದಿಯ ಹೆಸರು ದಾಖಲ್ ಇದೆ ಎಂದರೆ ಸರಿಯಲ್ಲ. ನಾನು ನನ್ನ ಕೇಸಿಗೆ ಅನುಕೂಲ ಆಗಲೀ ಎಂದು ಪಂಚಾಯತಿ

ದಾಖಲೆಗಳನ್ನು  ಸೃಷ್ಟಿ ಮಾಡಿ ಹಾಜರುಪಡಿಸಿದ್ದೆನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೆ.ಕೆ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳಃ ಸವಣೂರ)